ಅಪ್ಪಣ್ಣ' ಎಂಬುವನ ಮೊಮ್ಮಗ ತಾನೇ ಹೌದು ಎನ್ನುವುದನ್ನು ಸಾಧಿಸಿ ತೋರಿಸಲು ವಂಶವೃಕ್ಷ ಇತ್ಯಾದಿಗಳನ್ನು ಮಾಡಿಸಿದ್ದ. ಹೀಗೆ ಕೆಲವು ವರ್ಷಗಳ ಕಾಲ ಹೋರಾಟ ನಡೆಸಿ ಯಶಸ್ವಿಯಾದ. ಕೊನೆಗೂ ಅವನು ಬಾರಕಳಿಯ ಅಪ್ಪಣ್ಣ ಅಥವಾ ಇಸ್ತಿರಿ ಅಪ್ಪಣ್ಣ ಎಂದು ಜನಪ್ರಿಯನಾಗಿದ್ದವನ ಮೊಮ್ಮಗ ಎಂದು ದಾಖಲೆ ಸರಿ ಮಾಡಿಸಿಕೊಂಡನೋ, ಬೇರೆ ವಿಧಾನದಲ್ಲಿ ಜಾಗವನ್ನು ಮಾರಾಟ ಮಾಡಲು ಸಫಲನಾದನೋ ತಿಳಿಯದು.

ಈ ಇಸ್ತಿರಿ ಅಪ್ಪಣ್ಣನ ಕಥೆಯೂ ವಿಚಿತ್ರವಾಗಿದೆ. ಅದು ಸುಮಾರು ಐವತ್ತು- ಅರವತ್ತು ವರ್ಷಗಳ ಹಿಂದಿನ ಕಥೆ. ಆಗ ಮಾಕಾಲ ಪಟ್ಟಣ ಇಷ್ಟು ಬೆಳೆದಿರಲಿಲ್ಲ. ಆಗ ಅದರ ಹೊರವಲಯದಲ್ಲಿದ್ದ ಕೋಳದಬೈಲು ಜೈಲಿನಲ್ಲಿ ಇಸ್ತಿರಿ ಅಪ್ಪಣ್ಣ ಇಪ್ಪತ್ತೆರಡು ವರ್ಷಗಳ ಕಾಲ ಬಂಧಿಯಾಗಿದ್ದ. ಈಗ ಮಾಕಾಲ ಪಟ್ಟಣ ಬೆಳೆದು ನಗರವಾಗಿ ಕೋಳದಬೈಲು ನಗರದ ಒಳಗೆಯೆ ಅಡಕವಾಗಿ ಕೆಬಿ ಎಕ್ಸ್‌ಟೆನ್ಶನ್ (ಕೆ.ಬಿ. ಬಡಾವಣೆ) ಆಗಿದೆ. ಜೈಲು ಈಗಿನ ನಗರದ ಹೊರವಲಯಕ್ಕೆ ಹೋಗಿದೆ.

ಆಗ ಪಟ್ಟಣದಲ್ಲಿ ಸಿಂಗಾಡಿ ನರಸಿಂಹ ಎಸ್ಸೈ ಆಗಿದ್ದರು. ಒಮ್ಮೆ ಮೇಲಧಿಕಾರಿಗಳು ಅವರಿಗೆ ಒಂದು ಸೂಚನೆ ಕೊಟ್ಟರು. 'ನಿಮ್ಮ ಏರಿಯಾದಲ್ಲಿ ಗಾಂಜಾ ಬೆಳೆಯುತ್ತಾರೆ; ಮಾರಾಟ ಮಾಡುತ್ತಾರೆ ಎಂಬ ಸುದ್ದಿ ಇದೆ. ಪ್ರೊಹಿಬಿಶನ್ ಆ್ಯಕ್ಟ್ ಪ್ರಕಾರ ನಿಮ್ಮಲ್ಲಿ ಒಂದು ಕೇಸ್ ಕೂಡ ಕೋರ್ಟಿಗೆ ಹೋಗಿದ್ದಿಲ್ಲ. ಯಾಕೆ? ಸ್ವಲ್ಪ ನೋಡಿ. ಸ್ಟ್ರಿಕ್ಟ್ ಆಕ್ಷನ್ ತಗೊಳ್ಳಿ' ಎಂದು ಸೂಚ್ಯವಾಗಿ ಹೇಳಿದ್ದರು.

ಸಿಂಗಾಡಿ ಸಾಹೇಬರು ತಮ್ಮ ಸಿಬ್ಬಂದಿಯನ್ನು ಕರೆದು, 'ಇದಕ್ಕೆ ಏನಾದರೂ ಮಾಡಬೇಕಲ್ಲ? ಯಾರಾದರೂ ಸಸ್ಪೆಕ್ಟ್ ಇದ್ದರೆ ಒಂದು ಕೇಸ್ ಬುಕ್ ಮಾಡಿಬಿಡಿ ಅತ್ಲಾಗಿ. ಮತ್ತೆ ಕೇಸ್ ಬಿದ್ದುಹೋದರೂ ಅಡ್ಡಿಯಿಲ್ಲ' ಎಂದರು.

ಆಗ ಹೆಡ್ ಕಾನ್‌ಸ್ಟೆಬಲ್ ಕರುಣಾಕರ ಇಲ್ಲಿ ಇದ್ದ. ಅವನು, 'ನಮ್ಮ ಏರಿಯಾದಲ್ಲಿ ಗಾಂಜಾ ಮಾರುವವರು ಯಾರಿದ್ದಾರೆ ಸರ್? ಕೇಸ್ ಬುಕ್ ಆಗಲೇಬೇಕು ಅಂತ ಇದ್ದರೆ ನಮ್ಮ ಇಸ್ತ್ರಿ ಅಪ್ಪಣ್ಣನ ಮೇಲೆಯೇ ಒಂದು ಕೇಸ್ ಬುಕ್ ಮಾಡಬೇಕಷ್ಟೆ. ನಮ್ಮ ಯೂನಿಫಾರ್ಮುಗಳಿಗೆ ಹೊರಗೆ ಇಸ್ತ್ರಿ ಹಾಕುವ ಬದಲಿಗೆ ಒಳಗೆ ಇಸ್ತ್ರಿ ಹಾಕಿಕೊಂಡಿರುತ್ತಾನೆ ಸ್ವಲ್ಪ ಸಮಯ' ಎಂದ.

ಆಗ ಇಸ್ತ್ರಿ ಅಪ್ಪಣ್ಣ ಜೈಲು ರಸ್ತೆಯ ತುದಿಯಲ್ಲಿ ನಾಲ್ಕು ಬೀದಿ ಕೂಡುವಲ್ಲಿ ಇದ್ದ ಸಣ್ಣ ಆಟದ ಮೈದಾನದ ಅಂಚಿನಲ್ಲಿ ತನ್ನ ತಳ್ಳುಗಾಡಿಯನ್ನು ಇಟ್ಟುಕೊಂಡು ಇಸ್ತ್ರಿ ಹಾಕಿಕೊಡುತ್ತಿದ್ದ. ಪೊಲೀಸರು ಹೆಚ್ಚಾಗಿ ಓಡಾಡುವ ಜಾಗ ಅದಾಗಿದ್ದುದರಿಂದ ಅವರು ಅವನ ಬಳಿ ತಮ್ಮ ಯೂನಿಫಾರ್ಮನ್ನು ತಂದು ಇಸ್ತ್ರಿ ಹಾಕಿಸಿಕೊಂಡು ಹೋಗುತ್ತಿದ್ದರು. ಆಗಿನ ಅಲಿಖಿತ ನಿಯಮದ ಪ್ರಕಾರ ಪೊಲೀಸರಿಂದ ಯಾರೂ ಸಣ್ಣಪುಟ್ಟ ಸೇವೆಗಳಿಗೆ, ಸಣ್ಣಪುಟ್ಟ ವಸ್ತುಗಳಿಗೆ, ಕೆಲವೊಮ್ಮೆ ಅಪರೂಪಕ್ಕೆ ಊಟ- ತಿಂಡಿಗಳಿಗೂ ಕೂಡ ಹಣ ಪಡೆಯುತ್ತಿರಲಿಲ್ಲ. ಅಪ್ಪಣ್ಣ ಕೂಡ ಅವರಿಗೆ ಈ ಸೇವೆಯನ್ನು ಉಚಿತವಾಗಿಯೇ ಮಾಡಿಕೊಡುತ್ತಿದ್ದ. ಕೆಲವೊಮ್ಮೆ ಪೇದೆಗಳು ಮೇಲಧಿಕಾರಿಗಳ ಮನೆಯಿಂದ ಚೀಲದಲ್ಲಿ ತುಂಬಿಸಿಟ್ಟ ಒಗೆದ ಬಟ್ಟೆಗಳನ್ನು ಇಸ್ತ್ರಿ ಹಾಕಿಸಿಕೊಂಡು ಹೋಗಲು ತರುತ್ತಿದ್ದರು. ಎಲ್ಲಿ ಇಸ್ತ್ರಿ ಹಾಕಿಸಬೇಕು ಇತ್ಯಾದಿಗಳನ್ನು ಅಧಿಕಾರಿಗಳು ಹೇಳದಿದ್ದರೂ ಅದು ಅಪ್ಪಣ್ಣನ ಬಳಿಯೇ ಎನ್ನುವುದು ಎಲ್ಲರಿಗೂ ಗೊತ್ತಿತ್ತು.

ಈಗ ಕರುಣಾಕರ ಗಾಂಜಾ ಕೇಸಿನಲ್ಲಿ ಅಪ್ಪಣ್ಣನನ್ನೇ ಫಿಕ್ಸ್ ಮಾಡಬೇಕೆಂದು ಹೇಳಿದಾಗ ಎಲ್ಲರಿಗೂ, 'ಛೇ! ಪಾಪ! ಬೇಡವಿತ್ತು' ಎನಿಸಿದರೂ ಯಾರೂ ಮಾತಾಡಲಿಲ್ಲ. ಮಾತಾಡಿದರೆ, 'ಹಾಗಾದರೆ ನೀನೇ ಯಾರನ್ನಾದರೂ ಹಿಡಿದುಕೊಂಡು ಬಾ' ಎಂದು ಹೇಳಿಯಾರು ಎಂಬ ಭಯವೂ ಇತ್ತು.

ಅಪ್ಪಣ್ಣ ಪಶುವಿನಂತಹ ಮನುಷ್ಯ. ಯಾರ ಬಳಿಯೂ ಲೋಕಾಭಿರಾಮವಾಗಿ ಒಂದು ಮಾತನ್ನೂ ಆಡುತ್ತಿರಲಿಲ್ಲ. ಅಗತ್ಯದ ಮಾತುಗಳನ್ನೂ ಮೆಲುದನಿಯಲ್ಲಿಯೇ ಮಾತಾಡುವುದು ಅವನ ಕ್ರಮ. ನಡೆಯುವಾಗಲೂ ತಲೆ ತಗ್ಗಿಸಿಕೊಂಡು ತನ್ನ ದಾರಿಯನ್ನೇ ನೋಡುತ್ತಾ ನಡೆದು ಗಮ್ಯ ಸ್ಥಾನವನ್ನು ಸೇರುತ್ತಿದ್ದ. ಆಚೀಚೆ ಯಾರನ್ನಾದರೂ ಗಮನಿಸಿ ಕೊಂಡು, ಮಾತಾಡಿಸಿಕೊಂಡು ಹೋಗುವ ವ್ಯಕ್ತಿತ್ವ ಅವನದಲ್ಲ. ತನ್ನ ಬಡತನವನ್ನು ಮತ್ತು ತನ್ನನ್ನು ತಾನೇ ಪ್ರಪಂಚದ ದೃಷ್ಟಿಯಿಂದ ಮರೆಯಾಗಿಸಿಕೊಂಡು,